ಡಾ|| ಎಂ.ಶಂಕರ್ ನಾಯಕ್: ಕಿಕ್ಕಿಂಗ್ ಮಾಡಿದರೆ ಸರ್ಕಾರದ ಇತಿಮಿತಿಯಲ್ಲಿ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

MR.SPEAKER : Leave it, that is altogether a separate question. But you please take steps to recover the dues to be paid to the Government.

**ಬೆಳಗಾವಿ ಜಿಲ್ಲೆಯ ಸ್ಕೂಲ್ ಬೋರ್ಡುಗಳಲ್ಲಿ ಸೇವೆ ಸಲ್ಲಿಸುತ್ತಿದ್ದ ಶಿಕ್ಷಕರನ್ನು ಸೇವಾವಧಿ ಬಗ್ಗೆ.**

138 - ಶ್ರೀ ನಾಯಕ್ ಚಂದ್ರಶೇಖರ್ ಸದಾಶಿವ (ಗೋಕಾಕ್) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕೆಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಬೆಳಗಾವಿ ಜಿಲ್ಲೆಯಲ್ಲಿ ಸ್ಕೂಲ್ ಬೋರ್ಡ್ ನಿಂದ ಸರ್ಕಾರಿ ಸೇವೆಗೆ ಬಂದ ಶಿಕ್ಷಣ ಸಂಖ್ಯೆ ಎಷ್ಟು?*

*ಆ) ಸದರಿ ಶಿಕ್ಷಕರ ಸ್ಕೂಲ್ ಬೋರ್ಡ್ ಸೇವೆಯನ್ನು ಒಟ್ಟು ಸೇವಾವಧಿ ಎಂದು ಪರಿಗಣಿಸಲಾಗಿದೆಯೆ?*

*ಇ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣವೇನು?*

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) 7832

ಆ) ಪರಿಗಣಿಸಲಾಗಿದೆ.

ಇ) ಉದ್ಭವಿಸುವುದಿಲ್ಲ.

ಶ್ರೀ ಎಸ್. ಚಂದ್ರಶೇಖರ್ ನಾಯಕ್ : ಅಧ್ಯಕ್ಷರೆ, ಮಂತ್ರಿಗಳು ಕೊಟ್ಟಂಥ ತಮ್ಮ ಉತ್ತರದಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಸ್ಕೂಲ್ ಬೋರ್ಡ್ ನಿಂದ ಸರ್ಕಾರಿ ಸೇವೆಗೆ ಬಂದ ಶಿಕ್ಷಕರ ಸಂಖ್ಯೆ:7832 ಎಂದು ಹೇಳಿದ್ದಾರೆ. ಆದರೆ ಅದರಲ್ಲೂ 250 ಜನ ಇನ್ನು ಉಳಿದುಕೊಂಡಿದ್ದಾರೆ, ಅವರಿಗೆ ವಾರ್ಷಿಕ ಬಡ್ತಿ, ಸೇವಾ ಬಡ್ತಿ, ಅವರ ನಿವೃತ್ತಿಯಲ್ಲಿಯು ಹೆಚ್ಚು ಪರಿಣಾಮಕಾರಿಯಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಅದಕ್ಕಾಗಿ ಆ ಯಾದಿಯನ್ನು ಮಾನ್ಯ ಸಚಿವರಿಗೆ ಕಳುಹಿಸಿಕೊಡುತ್ತೇನೆ, ಅದರ ಬಗ್ಗೆ ಇನ್ನಷ್ಟು ಸೂಕ್ಷ್ಮವಾಗಿ ಪರಿಶೀಲಿಸಬೇಕೆನ್ನುವ ವಿಚಾರವನ್ನು ಮಾನ್ಯ ಅಧ್ಯಕ್ಷರ ಮೂಲಕ ತಮಗೆ ತಿಳಿಸಬಯಸುತ್ತೇನೆ.

ಅಧ್ಯಕ್ಷರು : ಅವರು ಅದನ್ನು ಮಾಡಿಕೊಡುತ್ತಾರೆ ಬಿಡಿ, the Hon'ble Minister may please examine that proposal.